ಒ.ಎಸ್. ನಂ.21/2018
ಪಿಡಬ್ಲು-1

ದಿನಾಂಕ 26.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿ ಸವಾಲುಃ 1, 4 ರಿಂದ 11 ನೇ ಪ್ರತಿವಾದಿ ಪರ ವಕೀಲರಿಂದ**

ನಾನು ನನ್ನ ವಾದ ಪತ್ರದಲ್ಲಿ ತೋರಿಸಿರುವ ವಂಶಾವಳಿಯ ಬಗ್ಗೆ ಸರಕಾರಿ ಯಾವುದೆ ದಾಖಲೆಯನ್ನು ಪಡೆದಿಲ್ಲ. ನಾನು ನನ್ನ ವಾದ ಪತ್ರದಲ್ಲಿ ತೋರಿಸಿರುವ ವಂಶಾವಳಿಯನ್ನು ನನ್ನ ಇಚ್ಚೆಗನುಸಾರವಾಗಿ ಬರೆಸಿರುತ್ತೇನೆ ಎಂದರೆ ಸರಿ. 4 ರಿಂದ 11 ನೆ ಪ್ರತಿವಾದಿಯರು ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನಾನು ತಿಳಿದುಕೊಂಡಿಲ್ಲ. ಪ್ರತಿವಾದಿಯರು ಹೊನ್ನಪ್ಪನ 1 ನೆ ಹೆಂಡತಿ ಮಕ್ಕಳು ಎಂದು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅವರು 2 ನೆ ಹೆಂಡತಿ ಮಕ್ಕಳು ಎಂದು ನುಡಿಯುತ್ತಾರೆ. ಹೊನ್ನಪ್ಪನಿಗೆ ಸಾತಮ್ಮ ಮೊದಲನೆ ಹೆಂಡತಿಯಾಗಿರುತ್ತಾಳೆ. ಸದರಿ ಸಾತಮ್ಮಳ ಮದುವೆ ಯಾವ ವರ್ಷ ಮತ್ತು ತಿಂಗಳಲ್ಲಿ ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಪಾರ್ವತಿಯ ಮದುವೆ ಯಾವ ವರ್ಷ ಮತ್ತು ತಿಂಗಳಲ್ಲಿ ಆಯಿತು ಎಂದು ನನಗೆ ಹೇಳಲು ಬರುವುದಿಲ್ಲ. ಈ ದಾವೆ ಸಲ್ಲಿಸಿದಾಗ ನನಗೆ 38-ವರ್ಷವಾಗಿತ್ತು. ನಾನು ದಾವೆ ಸಲ್ಲಿಸಿದಾಗ ವಾದ ಪತ್ರದಲ್ಲಿ ನನ್ನ ವಯಸ್ಸು 38-ವರ್ಷ ಎಂದು ಬರೆಸಿರಬಹುದು. ನನ್ನ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು 32-ವರ್ಷ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 3 ನೆ ಪ್ರತಿವಾದಿಯರ ವಯಸ್ಸು ಎಷ್ಟಿರುತ್ತದೆ ಎಂದು ನನಗೆ ಗೊತ್ತಿಲ್ಲ. 4 ರಿಂದ 11 ನೆ ಪ್ರತಿವಾದಿಯರ ವಯಸ್ಸು ಎಷ್ಟಿರುತ್ತದೆ ಎಂದು ನನಗೆ ಗೊತ್ತಿಲ್ಲ.

4 ರಿಂದ 11 ನೆ ಪ್ರತಿವಾದಿಯರು ಕರಕಿಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ. 1 ನೆ ಪ್ರತಿವಾದಿಯು 4 ರಿಂದ 11 ನೆ ಪ್ರತಿವಾದಿಯರ ಜೊತೆ ಕರಕಿಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಪಾರ್ವತಿಯು 1 ನೆ ಪ್ರತಿವಾದಿಯ ಮೊದಲನೆ ಹೆಂಡತಿಯಾಗಿದ್ದು 4 ರಿಂದ 11 ನೆ ಪ್ರತಿವಾದಿಯರು ಒಂದನೆ ಹೆಂಡತಿಯ ಮಕ್ಕಳಾಗಿರುತ್ತಾರೆ ಎಂದರೆ ಸರಿಯಲ್ಲ. ಸಾತಮ್ಮಳು 1 ನೆ ಪ್ರತಿವಾದಿ ಹೆಂಡತಿ ಅಲ್ಲ ಹಾಗೂ ವಾದಿ ಮತ್ತು 2 ಮತ್ತು 3 ನೆ ಪ್ರತಿವಾದಿಯರು 1 ನೆ ಪ್ರತಿವಾದಿಯ ಮಕ್ಕಳಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ತಾವು ಹಾಜರುಪಡಿಸಿದ ದಾಖಲೆಗಳನ್ನು ಪಿಡಬ್ಲು-1 ರವರಿಗೆ ಪಾಟಿ ಸವಾಲಿನಲ್ಲಿ ತೋರಿಸಿ confrontation ಮಾಡಿ ನಿಶಾನೆಗೊಳಿಸಲು ಕೋರಿದ್ದು ಆದಕ್ಕೆ ವಾದಿ ಪರ ವಕೀಲರು ತಕರಾರು ಮಾಡಿದ್ದರಿಂದ ಪಾಟಿ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ